ಈ) 4708
ಅರ್ಹತೆ ಇಲ್ಲದಿರುವುದು

ಉ) ಅರ್ಹಗೊಂಡು ಪರಿಹಾರ ಪಡೆದ ಅರ್ಜಿಗಳು – 2793
ಪರಿಶೀಲನಾ ಹಂತದೊಳಗಿನ ಅರ್ಜಿಗಳು – 2022

ಊ) ಸರ್ಕಾರದ ವಿವಿಧ ಹಂತದಲ್ಲಿ ತೀರ್ಮಾನ ತೆಗೆದುಕೊಳ್ಳಬೇಕಾಗಿರುವುದರಿಂದಲೂ ಕೆಲವು ಬಾಕಿ ಇರುತ್ತವೆ 2004ನೇ ಜನವರಿ ತಿಂಗಳ ಒಳಗಾಗಿ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುವುದು

ಋ) ಸುಮಾರು ರೂ 3 00 ಲಕ್ಷಗಳು ಸರ್ಕಾರದ ಆಡಳಿತಾತ್ಮಕ ವೆಚ್ಚದಡಿ ಭರಿಸಲಾಗಿದೆ

ಎ) ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಜನರೊಂದಿಗೆ ನೇರ ಸಂವಾದಕ್ಕಾಗಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು

ರಾಜ್ಯದಲ್ಲಿ 110 ಕೆ ವಿ ಸ್ಟೇಷನ್‌ಗಳ ಮಂಜೂರಾತಿಯ ಬಗ್ಗೆ

61 (265) ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮನಗೌಡ (ತಿಕೋಟ) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಸರ್ಕಾರದ ಎಷ್ಟು 110 ಮತ್ತು 11 ಕೆ ವಿ ಸ್ಟೇಷನ್‌ಗಳನ್ನು ಮಂಜೂರು ಮಾಡಿದೆ

ಆ) ಮಂಜೂರಾಗಿರತಕ್ಕಂತಹ 110 11 ಕೆ ವಿ ಸ್ಟೇಷನ್‌ಗಳು ಯಾವುವು, ಮತ್ತು ಯಾವ ದಿನಾಂಕದಂದು ಮಂಜೂರಾಗಿವೆ

ಇ) ಮಂಜೂರಾಗಿರುವ ಸ್ಟೇಷನ್‌ಗಳಲ್ಲಿ ಪ್ರಾರಂಭಗೊಂಡಿರುವ ಹಾಗೂ ಪ್ರಾರಂಭವಾಗಿರದೇ ಇರುವ ಸ್ಟೇಷನ್‌ಗಳು ಯಾವುವು

ಈ) ಪ್ರತಿಯೊಂದು ಸ್ಟೇಷನ್‌ಗಳನ್ನು ಪೂರ್ತಿಗೊಳಿಸುವುದಕ್ಕೋಸ್ಕರ ಸರ್ಕಾರ ಹಾಕಿಕೊಂಡಿತಕ್ಕಂತಹ ಕಾಲಮಿತಿಗಳೇನು

ಉ) ಪ್ರಾರಂಭಗೊಂಡ ಸ್ಟೇಷನ್‌ಗಳ ಕಾಮಗಾರಿಗಳು ಈಗ ಯಾವ ಹಂತದಲ್ಲಿದೆ ಉಳಿದ ಸ್ಟೇಷನ್‌ಗಳ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು,

ಊ) ಕೆಲಸಗಳ ಪ್ರಾರಂಭ ಮತ್ತು ಪ್ರಗತಿಯಲ್ಲಿ ಆಗಿರುವ ವಿಳಂಬಗಳಿಗೆ ಕಾರಣಗಳೇನು

ಶ್ರೀ ಬಸವರಾಜಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿರುವ 110/11 ಕೆ ವಿ ಸಬ್ ಸ್ಟೇಷನ್‌ಗಳ ಒಟ್ಟು ಸಂಖ್ಯೆ 30

ಆ) ಕಳೆದ ಮೂರು ವರ್ಷಗಳಲ್ಲಿ ಮಂಜೂರಾಗಿರುವ 110/11 ಕೆ ವಿ ಸಬ್ ಸ್ಟೇಷನ್‌ಗಳು ಹಗೂ ಅವುಗಳ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿರುವ ನಿರ್ದಿಷ್ಟ ವಿವರಗಳನ್ನು ಅನುಬಂಧ – 1 ರಲ್ಲಿ ಒದಗಿಸಿದೆ

ಇ) ಪ್ರಾರಂಭಗೊಂಡಿರುವ ಹಾಗೂ ಪ್ರಾರಂಭವಾಗಿರದೇ ಇರುವ ಸ್ಟೇಷನ್‌ಗಳ ವಿವರಗಳನ್ನು ಅನುಬಂಧ–2 ರಲ್ಲಿ ನೀಡಿದೆ

ಈ) 33/11 ಎ ವಿ ಸಬ್ ಸ್ಟೇಷನ್ನುಗಳ ಸ್ಥಾಪನೆಗೆ ಸಾಮಾನ್ಯವಾಗಿ ನಿಗದಿಪಡಿಸಿರುವ ಕಾಲಮಿತಿಯು ಕಾರ್ಯನಿರ್ವಹಿಸಲು ನೀಡಲಾಗಿರುವ ಆದೇಶದ ದಿನಾಂಕದಿಂದ 9 ತಿಂಗಳುಗಳು ಹಾಗೂ 110/11 ಕೆ ವಿ ಸಬ್ ಸ್ಟೇಷನ್ನುಗಳ ಸ್ಥಾಪನೆಗಾಗಿ ಸಾಮಾನ್ಯವಾಗಿ ನಿಗದಿಪಡಿಸಿರುವ ಕಾಲಮಿತಿಯು ಕಾರ್ಯನಿರ್ವಹಸಲು ನೀಡಲಾಗಿರುವ ಆದೇಶದ ದಿನಾಂಕದಿಂದ 12 ತಿಂಗಳುಗಳೂ ಆಗಿರುತ್ತದೆ

ಉ) ಪ್ರಾರಾಂಭಗೊಂಡ 110/11 ಕೆವಿ ಸಬ್ – ಸ್ಟೇಷನ್‌ಗಳ ಕಾಮಗಾರಿಯು ವಿವಿಧ ಹಂತಗಳ ವಿವರಗಳನ್ನು ಅನುಬಂಧ – 3 ರಲ್ಲಿ ಒದಗಿಸಲಾಗಿದೆ ಹಾಗೂ ಉಳಿದ 110/11 ಕೆವಿ ಸಬ್– ಸ್ಟೇಷನ್ ಗಳ ಕೆಲಸವನ್ನು ಆರ್ಥಿಕ ಹೊಂದಾಣಿಕೆ ಆದ ನಂತರ ಆದ್ಯತೆಯ ಮೇರೆಗೆ ಕೈಗೆತ್ತಿಕೊಳ್ಳಲಾಗುವುದು

ಊ) ಈ ಕೆಳಗೆ ತಿಳಿಸಿದ ಕಾರಣಗಳಿಂದ ಕೆಲಸಗಳ ಪ್ರಾರಂಭ ಮತ್ತು ಪ್ರಗತಿಯಲ್ಲಿ ವಿಳಂಬವಾಗಿರುತ್ತದೆ

1 ಸಬ್–ಸ್ಟೇಷನ್‌ಗಳ ಸ್ಥಾಪನೆಗೆ ಸೂಕ್ತ ನಿವೇಶನ ದೊರೆಯದಿರುವುದು

2 ಕೆಲವು ಟರ್ನ್–ಕೀ ಆಧಾರದ ಮೇಲೆ ವಹಿಸಿರುವ ಕೆಲಸವನ್ನು ಗುತ್ತಿಗೆದಾರರು ನಿರ್ವಹಣೆಯಲ್ಲಿ ವಿಳಂಬವಾಗಿರುತ್ತದೆ

3 ಸಬ್ – ಸ್ಟೇಷನ್ ಗಳಿಗೆ ಜೋಡಿಸುವ ವಿದ್ಯುತ್ ಮಾರ್ಗಗಳಿಗೆ ಅರಣ್ಯ ಇಲಾಖೆಯಿಂದ ಅನುಮತಿ ದೊರಕುವುದರಲ್ಲಿ ವಿಳಂಬವಾಗಿರುವುದು

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 265 ಕ್ಕೆ ಅನುಬಂಧ–1

ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ (ಏಪ್ರಿಲ್ 2000 ದಿಂದ ಡಿಸೆಂಬರ್ 2003ರ ಅಂತ್ಯದವರೆಗೆ) ಮಂಜೂರಾಗಿರುವ 110/11 ಕೆ ವಿ ಸಬ್–ಸ್ಟೇಷನ್‌ಗಳು ಹಾಗೂ ಅವುಗಳ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿರುವ ನಿರ್ದಿಷ್ಟ ದಿನಾಂಕದ ವಿವರಗಳು

ಕ್ರ ಸಂ	ಜಿಲ್ಲೆ	ಸ್ಥಳ	ಆಡಳಿತಾತ್ಮಕ ಮಂಜೂರಾತಿ ನೀಡಿರುವ ದಿನಾಂಕ
1	ಬೀದರ್	ಹಬ್ಸಿಕೋಟೆ	07–04–00
2	ಹಾಸನ	ಡಿ ಎಂ ಕುರ್ಕಿ	07–04–01
3	ದಕ್ಷಿಣ ಕನ್ನಡ	ಗುರುವಾಯನಕೆರೆ	09–04–01
4	ರಾಯಚೂರು	ಚಿಕ್ಕಸಗೂರು	15–05–01
5	ಬಾಗಲಕೋಟೆ	ಬಾಗಲಕೋಟೆ	16–06–01
6	ಗದಗ	ಲಕ್ಷ್ಮೇಶ್ವರ	03–08–01
7	ಬೆಳಗಾಂ	ಬೈಲಹೊಂಗಲ	04–08–01
8	ಉತ್ತರ ಕನ್ನಡ	ಅಂಕೋಲ	09–08–01
9	ಗದಗ	ಬೆಳ್ಳಹಟ್ಟಿ	06–10–01
10	ಬಿಜಾಪುರ	ಮುದ್ದೇಬಿಹಾಳ	17–10–01

1	2	3	4
11	ತುಮಕೂರು	ಕೆ ಜಿ ಟೆಂಪಲ್	06–11–01
12	ಗದಗ	ರೋಣ	09–11–01
13	ಬಾಗಲಕೋಟೆ	ವಜ್ರಮಟ್ಟಿ	29–01–02
14	ಬಾಗಲಕೋಟೆ	ತೇರ್ ದಾಳ್	29–01–02
15	ಬೆಳಗಾಂ	ಸಂಕೇಶ್ವರ್	20–03–02
16	ಗುಲ್ಬರ್ಗ	ಕೊನ್ಕಲ್	28–03–02
17	ಚಿಕ್ಕಮಗಳೂರು	ನಿಡಗಟ್ಟ	20–05–02
18	ಚಿಕ್ಕಮಗಳೂರು	ನಾಗೇನಹಳ್ಳಿ	20–05–02
19	ಗದಗ	ಕುನ್ನೂರು	20–08–02
20	ಧಾರವಾಡ	ಆನಂದನಗರ	24–10–02
21	ಕೊಪ್ಪಳ	ಶ್ರೀರಾಮನಗರ	24–10–02
22	ಕೊಪ್ಪಳ	ವೆಂಕಟಗಿರಿ	24–10–02
23	ಬೀದರ್	ಸಂತಪುರ	24–10–02
24	ಬಳ್ಳಾರಿ	ತೆಕ್ಕಲಕೋಟೆ	19–11–02
25	ಬಳ್ಳಾರಿ	ಕುರುಗೋಡು	29–11–02
26	ಬಳ್ಳಾರಿ	ಕುಡತಿನಿ	30–11–02
27	ರಾಯಚೂರು	ಗಬ್ಬೂರು	03–02–03
28	ತುಮಕೂರು	ಹಂದನಕೆರೆ	03–05–03
29	ಬಿಜಾಪುರ	ಶಿರಬೂರು	08–05–03
30	ಚಿಕ್ಕಮಗಳೂರು	ನೇರಳೆಕೆರೆ	06–11–03

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ ರವರ ಚುಕ್ಕೆ

ಗುರುತಿಲ್ಲದ ಪ್ರಶ್ನೆ ಸಂಖ್ಯೆ 265ಕ್ಕೆ ಅನುಬಂಧ – 2

ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ (ಏಪ್ರಿಲ್ 2000 ದಿಂದ ಡಿಸೆಂಬರ್ 2003ರ ಅಂತ್ಯದವರೆಗೆ ಮಂಜೂರಾಗಿರುವ ಸಬ್ – ಸ್ಟೇಷನ್‌ಗಳಲ್ಲಿ ಕಾರ್ಯ ಪ್ರಾರಂಭವಾಗಿರುವ ಹಾಗೂ ಪ್ರಾರಂಭವಾಗದೇ ಉಳಿದಿರುವ ಸಬ್–ಸ್ಟೇಷನ್ ಗಳ ವಿವರಗಳು

ಕ್ರ ಸಂ	ಜಿಲ್ಲೆ	ಸ್ಥಳ
	ಅ) ಪ್ರಾರಂಭವಾಗಿರುವ ಕೆಲಸಗಳು	
1	ತುಮಕೂರು	ಕೆ ಜಿ ಟೆಂಪಲ್
2	ಹಾಸನ	ಡಿ ಎಂ ಕುರ್ಕೆ
3	ಬಾಗಲಕೋಟೆ	ವಜ್ರಮಟ್ಟಿ
4	ಬಾಗಲಕೋಟೆ	ತೇರ್‌ದಾಳ್

1	2	3
5	ಬೆಳಗಾಂ	ಸಂಕೇಶ್ವರ್
6	ಬೆಳಗಾಂ	ಬೈಲಹೊಂಗಲ
7	ಗದಗ	ರೋಣ
8	ಗದಗ	ಲಕ್ಷ್ಮೇಶ್ವರ
9	ಗದಗ	ಬೆಳ್ಳಹಟ್ಟಿ
10	ಗದಗ	ಕುನ್ನೂರು
11	ಬಿಜಾಪುರ	ಮುದ್ದೇಬಿಹಾಳ
12	ಉತ್ತರ ಕನ್ನಡ	ಅಂಕೋಲ
13	ಬೀದರ್	ಅಬ್ಸಿಕೋಟೆ
14	ಗುಲ್ಬರ್ಗ	ಕೊನ್ಕಲ್
15	ಬಾಗಲಕೋಟೆ	ಬಾಗಲಕೋಟೆ
16.	ದ ಕನ್ನಡ	ಗುರುವಾಯನಕೆರೆ
17.	ಬೀದರ್	ಸಂತಪುರ
	ಪ್ರಾರಂಭವಾಗದೇ ಉಳಿದಿರುವ ಕೆಲಸಗಳು	
1	ರಾಯಚೂರು	ಗಬ್ಬೂರು
2	ಧಾರವಾಡ	ಆನಂದನಗರ
3	ಚಿಕ್ಕಮಗಳೂರು	ನೇರಳೆಕೆರೆ
4.	ಬಿಜಾಪುರ	ಶಿರಗೂರು
5	ಚಿಕ್ಕಮಗಳೂರು	ನಿಡಗಟ್ಟ
6	ಚಿಕ್ಕಮಗಳೂರು	ನಾಗೇನಹಳ್ಳಿ
7	ರಾಯಚೂರು	ಚಿಕ್ಕಸಗೂರು
8	ಬಳ್ಳಾರಿ	ಕುಡತಿನಿ
9	ಕೊಪ್ಪಳ	ಶ್ರೀರಾಮನಗರ
10	ಕೊಪ್ಪಳ	ವೆಂಕಟಗಿರಿ
11	ತುಮಕೂರು	ಹಂದನಕೆರೆ
12	ಬಳ್ಳಾರಿ	ಕುರುಗೋಡು
13	ಬಳ್ಳಾರಿ	ತೆಕ್ಕಲಕೋಟೆ

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 265ಕ್ಕೆ ಅನುಬಂಧ-3

ರಾಜ್ಯದಲ್ಲಿ ಕಳದಮೂರು ವರ್ಷಗಳಲ್ಲಿ (ಏಪ್ರಿಲ್ 2000 ದಿಂದ ಡಿಸೆಂಬರ್ 2003ರ ಅಂತ್ಯದವರೆಗೆ) ಮಂಜೂರಾಗಿರುವ ಸಬ್-ಸ್ಟೇಷನ್‌ಗಳಲ್ಲಿ ಕಾರ್ಯಪ್ರಾರಂಭವಾಗಿರುವ ಹಾಗೂ ಕಾಮಗಾರಿಗಳ ಎವಿಧ ಹಂತಗಳ ವಿವರಗಳು

ಕ್ರ ಸಂ	ಜಿಲ್ಲೆ	ಸ್ಥಳ	ಕಾಮಗಾರಿಯ ಹಂತ
1	ತುಮಕೂರು	ಕೆ ಜಿ ಟಂಪಲ್	ಕಾಮಗಾರಿಯ ಹಂತದಲ್ಲಿದೆ
2	ಹಾಸನ	ಡಿ ಎಂ ಕುರ್ಕೆ	ಅಂತಿಮ ಹಂತದಲ್ಲಿದೆ
3	ಬಾಗಲಕೋಟೆ	ವಜ್ರಮಟ್ಟಿ	ಮುಕ್ತಾಯ ಹಂತದಲ್ಲಿದೆ
4	ಬಾಗಲಕೋಟೆ	ತೇರ್‌ದಾಳ್	ಮುಕ್ತಾಯ ಹಂತದಲ್ಲಿದೆ
5	ಬೆಳಗಾಂ	ಸಂಕೇಶ್ವರ್	ಮುಕ್ತಾಯ ಹಂತದಲ್ಲಿದೆ
6	ಬೆಳಗಾಂ	ಬೈಲಹೊಂಗಲ	ಮುಕ್ತಾಯ ಹಂತದಲ್ಲಿದೆ
7	ಗದಗ	ರೋಣ	ಮುಕ್ತಾಯ ಹಂತದಲ್ಲಿದೆ
8	ಗದಗ	ಲಕ್ಷ್ಮೇಶ್ವರ	ಮುಕ್ತಾಯ ಹಂತದಲ್ಲಿದೆ
9	ಗದಗ	ಬೆಳ್ಳಹಟ್ಟಿ	ಪ್ರಗತಿಯಲ್ಲಿದೆ
10	ಗದಗ	ಕುನ್ನೂರು	ಪ್ರಗತಿಯಲ್ಲಿದೆ
11	ಬಿಜಾಪುರ	ಮುದ್ದೇಬಿಹಾಳ	ಪ್ರಗತಿಯಲ್ಲಿದೆ
12	ಉತ್ತರ ಕನ್ನಡ	ಅಂಕೋಲ	ಮುಕ್ತಾಯ ಹಂತದಲ್ಲಿದೆ
13	ಬೀದರ್	ಅಬ್ಲಿಕೋಟೆ	ಮುಕ್ತಾಯ ಹಂತದಲ್ಲಿದೆ
14	ಗುಲ್ಬರ್ಗ	ಕೊನ್ಕಲ್	ಪ್ರಗತಿಯಲ್ಲಿದೆ
15	ಬಾಗಲಕೋಟೆ	ಬಾಗಲಕೋಟೆ	5-6-03 ರಲ್ಲಿ ಚಾಲನೆಗೊಳಿಸಲಾಗಿದೆ
16	ದ ಕನ್ನಡ	ಗುರುವಾಯನಕೆರೆ	ಏಪ್ರಿಲ್ 03 ರಲ್ಲಿ ಚಾಲನೆಗೊಳಿಸಲಾಗಿದೆ
17	ಬೀದರ್	ಸಂತಪುರ	ಪ್ರಗತಿಯಲ್ಲಿದೆ

ಮುಂಡರಗಿ ಕ್ಷೇತ್ರ ವ್ಯಾಪ್ತಿಯ ಗ್ರಾಮಗಳಲ್ಲಿ ಸಬ್ ಸ್ಟೇಷನ್ ಪ್ರಾರಂಭಿಸುವುದರ ಬಗ್ಗೆ

62 (281) ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ಮುಂಡರಗಿ) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗದಗ ಜಿಲ್ಲೆ ಮುಂಡರಗಿ ತಾಲ್ಲೂಕು ಬಾಗೇವಾಡಿ ಹಾಗೂ ಡೋಣಿ ಗ್ರಾಮಗಳಿಗೆ 32 ಕೆ ವಿ ಸ್ಟೇಷನ್ ಮಂಜೂರು ಮಾಡಲಾಗಿದೆಯೇ

ಆ) ಹಾಗಿದ್ದಲ್ಲಿ, ಎಂದಿನಿಂದ ಕೆಲಸ ಪ್ರಾರಂಭಿಸಲಾಗುವುದು?